PETITION.

68

ಬಿ. ಹೀರಾನಾಯ್ಕ್, ಕೆ.ಎ.ಎಸ್.
ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿ
**B. HEERA NAIK, K.A.S.**
Private Secretary to Chief Minister

ಮುಖ್ಯಮಂತ್ರಿಯವರ ಸಚಿವಾಲಯ
ವಿಧಾನ ಸೌಧ, ಬೆಂಗಳೂರು – ೫೬೦ ೦೦೧
Chief Minister's Secretariat
Vidhana Soudha, Bangalore - 01

ಸಂ: ಮುಮಂ/ಆ.ಕಾ/ 322. /2013.

ದಿನಾಂಕ/Dated: 18.6.2013

ವ್ಯವಸ್ಥಾಪಕ ನಿರ್ದೇಶಕರು,
ಬೆಂಗಳೂರು ಮೆಟ್ರೋ ರೈಲ್ ನಿಗಮ ನಿಯಮಿತ,
ಎಂ.ಜಿ.ರಸ್ತೆ,
ಬೆಂಗಳೂರು.

ಮಾನ್ಯರೆ,

ಜಯನಗರ ಆರ್.ವಿ.ರಸ್ತೆ ನಿಲ್ದಾಣದಿಂದ ಬೊಮ್ಮಸಂದ್ರದವರೆಗೂ ಉದ್ದೇಶಿಸಲಾಗಿರುವ ಮೆಟ್ರೋ ರೈಲಿನ ಎರಡನೆ ಹಂತದ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ ಶ್ರೀ ವೈ.ಕೆ.ಮುದ್ದುಕೃಷ್ಣ, ಅಧ್ಯಕ್ಷರು, ಸಮನ್ವಯ ವೇದಿಕೆ (ರಿ), ಜಯನಗರ, ನಂ.10, 37ನೇ ಕ್ರಾಸ್, 8ನೇ ಬ್ಲಾಕ್, ಜಯನಗರ, ಬೆಂಗಳೂರು-82 ಇವರು ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲಿಸಿರುವ ಮನವಿಯನ್ನು ಇದರೊಂದಿಗೆ ಲಗತ್ತಿಸಿದ್ದು, ಅದು ಸ್ವಯಂಸ್ಪಷ್ಟವಿರುತ್ತದೆ.

ಮನವಿಯಲ್ಲಿನ ಅಂಶಗಳ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳುವಂತೆ ಕೋರಲು ಮಾನ್ಯ ಮುಖ್ಯಮಂತ್ರಿಯವರಿಂದ ಆದೇಶಿತನಾಗಿದ್ದೇನೆ.

ತಮ್ಮ ವಿಶ್ವಾಸಿ,

(ಬಿ.ಹೀರಾನಾಯ್ಕ್)
ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿ.

Draft Reply 1. encl
1/7/13

AEE(Ph2)(PB) pl. process

Bangalore Metro Rail Corporation Ltd. MD Sec. No. 96 02/7/13

DPP Ph1 / CE-P2 / CE-R4

CE(Ph2) This was discussed in MD's room on 2/7 when CE(Ph2) & CE(R4) were present for note ...

# ಸಮನ್ವಯ ವೇದಿಕೆ (ರಿ.) ಜಯನಗರ

ನಂ. 10, 37ನೇ ಕ್ರಾಸ್, 8ನೇ ಬ್ಲಾಕ್, ಜಯನಗರ, ಬೆಂಗಳೂರು – 560 082

ಅಧ್ಯಕ್ಷರು
ವೈ. ಕೆ. ಮುದ್ದುಕೃಷ್ಣ

ಉಪಾಧ್ಯಕ್ಷರು
ರಾಜಗೋಪಾಲ್ ಕಡಾಂಬಿ

ಕಾರ್ಯದರ್ಶಿ
ಬಿ.ಎಸ್. ವಿಶ್ವನಾಥ್

ಟಿ ಕಾರ್ಯದರ್ಶಿ
ಡಿ. ಅಶ್ವಥಪ್ಪ

ಖಜಾಂಚಿ
ಕೆ.ವಿ. ಶೆಣೈ

ಸದಸ್ಯರು
ಡಿ.ಎಸ್. ರಾಮಚಂದ್ರ
ಕೆ. ಎಂ.ಆರ್. ಪ್ರಸಾದ್
ಒಬೇದುಲ್ಲಾಖಾನ್
ಡಾ|| ಎಂ.ಸತೀಶ್ ಬೋಸ್ಲೆ
ಹೆಚ್.ಎಸ್. ನೀಲಕಂಠ
ವಿ. ಪಿ. ಬಾಹುಬಲಿ ರಾಜು
ರೇಶ್ ಬೋತ್ರ
ನರಸಿಂಹ ಶೆಟ್ಟಿ
ಶ್ರೀರಾಮ್

ಸಲಹಾ ಸಮಿತಿ
ಪ್ರೊ. ಬಿ. ಕೆ. ಚಂದ್ರಶೇಖರ್
ಪ್ರೊ. ಜಿ. ಕೆ. ಗೋವಿಂದರಾವ್
ಪದ್ಮಶ್ರೀ ಡಾ. ಚಿನ್ನಯ್ಯ
ಡಾ|| ಕೆ.ಎಂ. ಶ್ರೀನಿವಾಸಗೌಡ
ಜಿ. ವಿ. ಸುಂದರ್

ಇವರಿಗೆ, ದಿನಾಂಕ:10:06:2013

ಸನ್ಮಾನ್ಯ ಶ್ರೀ.ಸಿದ್ದರಾಮಯ್ಯ ಅವರು
ಮಾನ್ಯ ಮುಖ್ಯ ಮಂತ್ರಿಗಳು
ಕಾರ್ನಾಟಕ ಸರ್ಕಾರ
ವಿಧಾನ ಸೌಧ, ಬೆಂಗಳೂರು

ಮಾನ್ಯರೆ,

ವಿಷಯ:–ಜಯನಗರ ಆರ್.ವಿ.ರಸ್ತೆ ನಿಲ್ದಾಣದಿಂದ ಬೊಮ್ಮಸಂದ್ರದ ವರೆಗೂ ಉದ್ದೇಶಿಸಲಾಗಿರುವ ಮೆಟ್ರೋರೈಲಿನ ಎರಡನೆ ಹಂತದ ಬಗ್ಗೆ ಆಕ್ಷೇಪಣೆ.

---

ಜಯನಗರ ನಿವಾಸಿಗಳ ಸಮಗ್ರ ಜನಜೀವನ ಸುಧಾರಣೆಯನ್ನು ಗಮನದಲ್ಲಿಟ್ಟುಕೊಂಡು, ಸಹಜೀವನ, ಸಹಬಾಳ್ವೆ ಹಾಗು ಸಮನ್ವತೆಯನ್ನು ಸಾಧಿಸುವ ಉದ್ದೇಶದಿಂದ ಸಮನ್ವಯ ವೇದಿಕೆ(ರಿ) ಎಂಬ ಸಂಘಟನೆಯನ್ನು ಸಮಾನ ಮನಸ್ಕರ ಆಶಯದೊಂದಿಗೆ ನೊಂದಾಯಿಸಲಾಗಿದೆ. ಹಾಗೂ ಸರ್ಕಾರದ ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಸಹಕಾರ ಮತ್ತು ಬೆಂಬಲ ನೀಡುವುದರ ಮೂಲಕ, ನಿವಾಸಿಗಳ ಜೀವನದ ಗುಣಮಟ್ಟವನ್ನು ಕಾಪಾಡಿಕೊಂಡು ಸಮನ್ವಯತೆಯನ್ನು ಸಾಧಿಸುವ ನಿಟ್ಟಿನಲ್ಲಿ ಅರ್ಥಪೂರ್ಣವಾಗಿ ಶ್ರಮಿಸಲು ಪಣ ತೊಟ್ಟಿದೆ. ಪ್ರಸ್ತುತ ಈ ಕೆಳಕಂಡ ಅಂಶಗಳನ್ನು ತಮ್ಮ ಗಮನಕ್ಕೆ ತರುತ್ತಾ ಈ ಬಗ್ಗೆ ತುರ್ತು ಪರಿಹಾರವನ್ನು ದೊರಕಿಸಿಕೊಡುವಂತೆ ಕೋರುತ್ತೇವೆ.

ನಮ್ಮ ಮೆಟ್ರೋ ಸಂಸ್ಥೆವತಿಯಿಂದ ಈಗಾಗಲೆ ಆರ್.ವಿ.ರಸ್ತೆಯಲ್ಲಿ ಮೊದಲನೇ ಹಂತದ ಮೆಟ್ರೋಕಾಮಗಾರಿಯನ್ನು ಕೈಗೊಂಡಿದ್ದು, ಲಕ್ಷ್ಮಣ್‌ರಾವ್ ಸಾಲುದೋಟಗಳ ಸಾಕಷ್ಟು ಭಾಗವನ್ನು ಈ ಕಾಮಗಾರಿಗೆ ಆಕ್ರಮಿಸಿಕೊಳ್ಳಲಾಗಿರುವ ವಿಷಯ ತಮ್ಮೆಲ್ಲರಿಗೂ ತಿಳಿದಿದೆ. ಮೊದಲನೇ ಹಂತದ ಪೂರ್ಣಗೊಳ್ಳದ ಕಾಮಗಾರಿಯಿಂದಾಗಿ ನಗರದ ಅಂದ ಹಾಳು ಗೆಡುವಿರುವುದಲ್ಲದೇ, ನಗರದ ಪೌರಸೌಲಭ್ಯವನ್ನೂ ಅಸ್ತವ್ಯಸ್ತವಾಗಿಸಿದೆ. ಮೊದಲನೆ ಹಂತದ ಕಾಮಗಾರಿಯನ್ನು ಪೂರ್ಣಗೊಳಿಸದೆ, ಈಗ ಮತ್ತೆ ಆರ್.ವಿ.ರಸ್ತೆಯ ನಿಲ್ದಾಣದಿಂದ ಬೊಮ್ಮಸಂದ್ರಕ್ಕೆ ಸಂಪರ್ಕ ಒದಗಿಸುವ ಸಲುವಾಗಿ, 8ನೇ ಬಾಡಾವಣೆಯ 3ನೇ ಮುಖ್ಯರಸ್ತೆಯಲ್ಲಿರುವ ಉದ್ಯಾನವನಗಳನ್ನು ಆಕ್ರಮಿಸಿಕೊಂಡು 46ನೆಅಡ್ಡ ರಸ್ತೆಯಿಂದ–30ನೇ ಅಡ್ಡ ರಸ್ತೆಯವರೆಗೂ ಮೆಟ್ರೋ ಮೇಲುಸೇತುವೆಯನ್ನು ನಿರ್ಮಿಸಲು ಯೋಜನೆಯನ್ನು ರೂಪಿಸಿ ಮಣ್ಣು ಪರಿಕ್ಷೆ ಇತ್ಯಾದಿ ಕಾಮಕಾರಿಗಳು ನಡೆಯುತ್ತಿರುವುದನ್ನು ಗಮನಿಸಲಾಗಿದೆ. ಇದರಿಂದ:–

1) ಐತಿಹಾಸಿಕ ಪ್ರಸಿದ್ದಿ ಹೊಂದಿರುವ, ನಮ್ಮ ಪೂರ್ವಿಕರು ನಮಗಾಗಿ ಉಡುಗೊರೆಯಾಗಿ ನೀಡಿರುವ ಹಾಗೂ ಜಯನಗರ ಬಡಾವಣೆಯ ನಾಗರಿಕರ ಜೀವದುಸಿರಾಗಿರುವ ಲಕ್ಷ್ಮಣ್‌ರಾವ್ ಸಾಲುದೋಟಗಳು ಸಂಪೂರ್ಣವಾಗಿ ನಾಶವಾಗುವ ಸಾಧ್ಯತೆಗಳಿವೆ. ಅಲ್ಲದೆ, ಇಡಿ ಏಷ್ಯಾದಲ್ಲಿಯೇ ಅತಿ ದೊಡ್ಡ ಬಡಾವಣೆ ಎನಿಸಿಕೊಂಡಿರುವ, ಜಯನಗರ ಬಡಾವಣೆ ತನ್ನ ವಾಸಯೋಗ್ಯ ಗುಣಾಂಶಗಳನ್ನು ಕಳೆದುಕೊಳ್ಳುವುದರಲ್ಲಿ ಯಾವುದೇ ಉತ್ಪ್ರೇಕ್ಷೆ ಇಲ್ಲ.

66


# ಸಮನ್ವಯ ವೇದಿಕೆ (ರಿ.) ಜಯನಗರ

ನಂ. 10, 37ನೇ ಕ್ರಾಸ್, 8ನೇ ಬ್ಲಾಕ್, ಜಯನಗರ, ಬೆಂಗಳೂರು – 560 082



ಅಧ್ಯಕ್ಷರು

ವೈ. ಕೆ. ಮುದ್ದುಕೃಷ್ಣ

ಉಪಾಧ್ಯಕ್ಷರು

ರಾಜಗೋಪಾಲ್ ಕಡಾಂಬಿ

ಕಾರ್ಯದರ್ಶಿ

ಬಿ.ಎಸ್. ವಿಶ್ವನಾಥ್

ಜಂಟಿ ಕಾರ್ಯದರ್ಶಿ

ಡಿ. ಅಶ್ವಥಪ್ಪ

ಖಜಾಂಚಿ

ಕೆ.ವಿ. ಶೆಣೈ

ಸದಸ್ಯರು

ಡಿ.ಎಸ್. ರಾಮಚಂದ್ರ

ಕೆ. ಎಂ.ಆರ್. ಪ್ರಸಾದ್

ಒಬೇದುಲ್ಲಾಖಾನ್

ಡಾ॥ ಎಂ.ಸತೀಶ್ ಬೋಸ್ಲೆ

ಹೆಚ್.ಎಸ್. ನೀಲಕಂಠ

ವಿ. ಪಿ. ಬಾಹುಬಲಿ ರಾಜು

ಸುರೇಶ್ ಬೋತ್ರ

ನರಸಿಂಹ ಶೆಟ್ಟಿ

ಶ್ರೀರಾಮ್

ಸಲಹಾ ಸಮಿತಿ

ಪ್ರೊ. ಬಿ. ಕೆ. ಚಂದ್ರಶೇಖರ್

ಪ್ರೊ. ಜಿ. ಕೆ. ಗೋವಿಂದರಾವ್

ಪದ್ಮಶ್ರೀ ಡಾ. ಚಿನ್ನಯ್ಯ

ಡಾ॥ ಕೆ.ಎಂ. ಶ್ರೀನಿವಾಸಗೌಡ

ಜಿ. ವಿ. ಸುಂದರ್


2) ಈ ಸಂಬಂಧವಾಗಿ ನಮ್ಮ ಮೆಟ್ರೋ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಿಗೆ ದಿ.19.11.2012 ರ ಪತ್ರದಲ್ಲಿ ಆಕ್ಷೇಪಣಾ ಮನವಿಯನ್ನು ಸಲ್ಲಿಸಿ ಸಾರ್ವಜನಿಕರೊಡನೆ ಸಮಾಲೋಚನೆ ನಡೆಸಲು ದಿನಾಂಕವನ್ನು ನಿಗದಿಪಡಿಸಲು ಕೋರಲಾಗಿತ್ತು. ಆದರೆ ಅವರಿಂದ ಇದುವರೆಗೂ ಯಾವುದೇ ತರವಾದ ಸೂಚನೆ ಬಂದಿರುವುದಿಲ್ಲ. ಬದಲಿಗೆ ಅವರಿಂದ ವ್ಯತಿರಿಕ್ತ ಪ್ರತಿಕ್ರಿಯೆಗಳು ಬರಲಾರಂಭಿಸಿವೆ. ನಿವಾಸಿಗಳ ಪ್ರಶ್ನೆಗಳಿಗೆ ಹಾರಿಕೆಯ ಉತ್ತರ ಅಥವಾ ಅನಿಶ್ಚಿತ ಉತ್ತರ ನೀಡುವ ಪರಿಪಾಠವನ್ನು ಬಿ.ಎಂ.ಆರ್.ಸಿ.ಎಲ್ ಅಧಿಕಾರಿಗಳು ರೂಢಿಸಿಕೊಂಡಿರುತ್ತಾರೆ. ಮಾಹಿತಿ ಹಕ್ಕು ಕಾಯಿದೆ ಅಡಿ ಕೋರುವ ಮಾಹಿತಿಗಳನ್ನು ನೀಡುವಲ್ಲಿ ವಿಳಂಬ ನೀತಿ ಅನುಸರಿಸಲಾಗುತ್ತಿದೆ.

3) ಮೆಟ್ರೋ ಯೋಜನೆಗೆ ನಮ್ಮ ಬೆಂಬಲವಿದೆ. ಆದರೆ, ಪರಿಸರವನ್ನು ಮತ್ತು ಆಜು ಬಾಜು ಇರುವ ವಾಸದ ಮನೆಗಳನ್ನು ನಾಶಮಾಡಿ, ಯಾವುದೇ ಪರ್ಯಾಯ ಯೋಜನೆಗಳಿಗೆ ಕಿವಿಗೊಡದೆ ತಮ್ಮ ಹಟವನ್ನು ಸಾಧಿಸಲು ಹೊರಟಿರುವ ಮೆಟ್ರೋ ಸಂಸ್ಥೆಯ ಈ ನಿಲುವಿಗೆ ನಮ್ಮ ವಿರೋಧವನ್ನು ವ್ಯಕ್ತಪಡಿಸುವುದು ಈಗ ಅನಿವಾರ್ಯವಾಗಿದೆ.

4) ನಮಗೆ ಲಭ್ಯವಿರುವ ಮಾಹಿತಿ ಪ್ರಕಾರ 2ನೇ ಹಂತದ ಮಾರ್ಗವನ್ನು ಈಗಾಗಲೆ ನಿರ್ಧಿಷ್ಟವಾಗಿ ಅಂತಿಮಗೊಳಿಸಿದ್ದು, ರೈಟ್ಸ್ ಎಂಬ ಸಂಸ್ಥೆ ಮೂಲಕ ಸರ್ವೇಕ್ಷಣಾ ಕಾರ್ಯ ಮುಗಿದಿದ್ದು, ಸಂಬಂಧ ಪಟ್ಟಂತೆ ನಕ್ಷೆಗಳನ್ನು ಸಿದ್ಧಪಡಿಸಲಾಗಿದೆಯೆಂದು ತಿಳಿದು ಬಂದಿದೆ. ಆದಾಗ್ಯೂ ಎರಡನೇ ಹಂತದ ಮಾರ್ಗ ಅಂತಿಮಗೊಂಡಿಲ್ಲವೆಂದು ಸಾರ್ವಜನಿಕರಿಗೆ ಸುಳ್ಳು ಮಾಹಿತಿ ನೀಡುತ್ತಿರುತ್ತಾರೆ,

5) ಈಗಾಗಲೆ ಐತಿಹಾಸಿಕ ಲಕ್ಷ್ಮಣ್ ರಾವ್ ಉದ್ಯಾನವನದ ಬಹುಭಾಗ, ಮೆಟ್ರೋಕಾಮಗಾರಿ ಹಾಗೂ ಅನಧಿಕೃತಮಂದಿರಗಳ ನಿರ್ಮಾಣಕ್ಕೆ ಬಳಕೆಯಾಗಿದೆ. ಇದರಿಂದಾಗಿ ಜಯನಗರ ಬಡಾವಣೆಯು ತನ್ನ ಮೂಲ ಸ್ವರೂಪವನ್ನು ಕಳೆದುಕೊಂಡು, ಅರೆ ವಾಣಿಜ್ಯ ಪ್ರದೇಶವಾಗಿ ಪರಿವರ್ತನೆಗೊಂಡಿದೆ.

6) ಅಲ್ಲದೆ ಎರಡನೇ ಹಂತದ ಮಾರ್ಗರೂಪಿಸಲು ಬಳಸಿಕೊಳ್ಳಲುದ್ದೇಶಿಸಿರುವ ಉದ್ಯಾನವನಗಳಲ್ಲಿ ಈಗಾಗಲೆ ಕಾವೇರಿ ನೀರಿನ ಬೃಹತ್ ಕೊಳವೆಗಳನ್ನು ಅಳವಡಿಸಲಾಗಿದೆ.

ಈ ಮೇಲೆ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ತಮ್ಮಲ್ಲಿ ಈ ಕೆಳಕಂಡ ಮನವಿಯನ್ನು ಮಾಡಲಿಚ್ಚಿಸುತ್ತೇವೆ.

1) ಎರಡನೇ ಹಂತದ ಕಾಮಗಾರಿ/ಯೋಜನೆಯನ್ನು ಅಂತಿಮ ಗೊಳಿಸುವ ಮುನ್ನ ಸಾರ್ವಜನಿಕರು/ಬಡಾವಣೆ ನಿವಾಸಿಗಳ ಜೊತೆ ಸಮಾಲೋಚನೆ ನಡೆಸಿ ಸಲಹೆಗಳನ್ನು ಪಡೆದುಕೊಳ್ಳುವಂತೆ ಬಿ.ಎಮ್.ಆರ್.ಸಿ.ಎಲ್ ಅಧಿಕಾರಿಗಳಿಗೆ ಸೂಚನೆ ನೀಡಬೇಕು.

2) ಅತ್ಯಂತ ಕಡಿಮೆ ಉದ್ಯಾವನದ ನಷ್ಟ ಹಾಗೂ ಅತ್ಯಂತ ಕಡಿಮೆ ಖಾಸಗಿ ಆಸ್ತಿಗಳ ಸ್ವಾಧೀನಕ್ಕೆ ಗಮನ ನೀಡಿ ಇಂಜನಿಯರಿಂಗ್ ಮೂಲ ತತ್ವಗಳಿಗೆ ಅನುಗುಣವಾಗಿ ಪರ್ಯಾಯ ಯೋಜನೆ ರೂಪಿಸಲು ಸೂಚಿಸಬೇಕು.

ಈ ಮೇಲಿನ ಅಂಶಗಳ ಬಗ್ಗೆ ತಾವು ವೈಯಕ್ತಿಕ ಗಮನ ಹರಿಸಿ ಸಾರ್ವಜನಿಕರಿಗೆ ಹಾಗೂ ನಗರದ ಸೌಂದರ್ಯಕ್ಕೆ ಧಕ್ಕೆ ಬಾರದಂತೆ ಸೂಕ್ತ ಪರಿಹಾರ ನೀಡಬೇಕೆಂದು ಕೋರುತ್ತೇನೆ.

ಧನ್ಯವಾಧಗಳೊಂದಿಗೆ

ಇರತಿ ತಮ್ಮ ವಿಶ್ವಾಸಿ

(ವೈ.ಕೆ.ಮುದ್ದುಕೃಷ್ಣ)
ಅಧ್ಯಕ್ಷರು